# ದ್ವಿಪಾದಿ





ಈ ಹಂದಿಯನ್ನು ನೋಡಿ. ಅದು ತನ್ನ ಮುಂಗಾಲುಗಳ ಮೇಲೆ ನಡೆಯುತ್ತಿದೆ. ಏಕೆಂದರೆ ಅದಕ್ಕೆ ಹಿಂಗಾಲುಗಳೇ ಇಲ್ಲ. ಅದೇಕೋ ನಿಸರ್ಗ ಅದಕ್ಕೆ ಹಿಂಗಾಲುಗಳನ್ನು ದಯ ಪಾಲಿಸಲೇ ಇಲ್ಲ. ಜೀವನವಿಡೀ ಅದು ನಡೆಯಬೇಕಾದರೆ ಹೀಗೇ ಸರ್ಕಸ್ ಮಾಡಲೇ ಬೇಕಾಗುತ್ತದೆ.

ಈ ನತದೃಷ್ಟ ಹಂದಿ ಎರಡೇ ಕಾಲುಗಳೊಂದಿಗೆ ಹುಟ್ಟಿದ್ದು 2011ರ ಜುಲೈ ತಿಂಗಳಿನಲ್ಲಿ. ಹುಟ್ಟಿದ ಮೊದಲ ಕೆಲ ವಾರ ಅದು ನಡೆಯಲು ತುಂಬ ಪ್ರಯಾಸ ಪಟ್ಟಿತು. ಇದರ ಮಾಲೀಕ, ಚೀನಾದ ರೈತ ಗೇ ಕ್ಷಿನ್ ಪಿಂಗ್, ಅದನ್ನು ಅಂಗವಿಕಲ ಮರಿ ಎಂದು ತಿರಸ್ಕಾರ ಮಾಡಲಿಲ್ಲ. ಉಳಿದ ಹಂದಿಗಿಂತಲೂ ಹೆಚ್ಚು ಮುತುವರ್ಜಿ ವಹಿಸಿ ಅದು ತನ್ನ ಮುಂಗಾಲುಗಳ ಮೇಲೆ ನಿಲ್ಲಲು ಹಾಗೂ ನಡೆಯಲು ತರಬೇತಿ ನೀಡಿದ. ಈಗ ಅದು ಪೂರ್ಣ ಪ್ರಮಾಣದಲ್ಲಿ ಆರೋಗ್ಯಕರವಾಗಿ ಬೆಳೆದು 30 ಕಿಲೋ ಭಾರವಾಗಿದೆ. ಯಾರ ಸಹಾಯ, ಸಹಕಾರವೂ ಇಲ್ಲದೆ ತನ್ನ ಮುಂದಿನ ಕಾಲುಗಳ ಮೇಲೆಯೇ ದೇಹವನ್ನು ಸಮತೂಕಗೊಳಿಸಿ ಸುತ್ತಮುತ್ತ ತಿರುಗಾಡುತ್ತದೆ. ಚೀನಾದ ಪೂರ್ವ ಪ್ರಾಂತ್ಯವಾದ ಅನ್‌ಹುಯಿ ಎಂಬ ಹಳ್ಳಿಯಲ್ಲಿ ಈ ಎರಡು ಕಾಲಿನ ಹಂದಿ ಎಲ್ಲರ ಮನೆಯ ಪ್ರೀತಿಪಾತ್ರ ಪ್ರಾಣಿ!



ಇಂತಹದ್ದೇ ಇನ್ನೊಂದು ಹಂದಿ ಚೀನಾದ ಹೆನ್ನಾನ್ ಪ್ರಾಂತ್ಯದಲ್ಲಿದೆ. ಅದಕ್ಕೀಗ ಹತ್ತು ತಿಂಗಳ ಹರೆಯ. ಅದಕ್ಕೂ ಇರುವುದು ಎರಡೇ ಮುಂಗಾಲುಗಳು. ಅದೂ ತನ್ನ ಮುಂಗಾಲುಗಳನ್ನು ಬಳಸಿಯೇ ನಡೆದಾಡುತ್ತದೆ. ಝು ಜಿಯಾನ್ ಕ್ವಿಯಾಂಗ್ ಎಂಬುದು ಅದರ ಹೆಸರು. ಚೀನಿ ಭಾಷೆಯಲ್ಲಿ ಇದರ ಅರ್ಥ 'ಬಲಿಷ್ಟ ಮನೋಬಲದ ಹಂದಿ' ಎಂದು! ಇದರ ನಂತರ ಹುಟ್ಟಿದ್ದು ರೈತ ಪಿಂಗ್‌ನ ಚಿತ್ರದಲ್ಲಿ ಕಾಣಿಸುವ ಹಂದಿ. ಆದರೆ ಪಿಂಗ್ ಇದಕ್ಕೆ ಯಾವ ಹೆಸರನ್ನೂ ಇಟ್ಟಿಲ್ಲ.

■ ಸುಭಾಸ ಯಾದವಾಡ

